ದಿನಾಂಕಃ 16.05.2023 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಬಿ ಎಂ ಎಲ್ ಜಿ ವಕೀಲರಿಂದಃ ಆರೋಪಿ ಪರವಾಗಿಃ

29. ಫ್ರಾಸಾ.4 ರಸುಲ್ಲಾ ಬೇಗಂ ಅಲಿಯಾಸ್ ರೇಷ್ಮಾ ರವರು ವಾಸವಿದ್ದ ಮನೆಯ ಅಸೆಸ್ ಮೆಂಟ್ ವಹಿ ಲಭ್ಯವಿರಲಿಲ್ಲವೆಂದು ತಿಳಿಸಿದ್ದೀರಿ ಸದರಿ ಮನೆಯ ವಿಸ್ತೀರ್ಣವೆಷ್ಟು ಎಂದು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಸದರಿ ಮನೆಯ ಹಾಲಿನ ವಿಸ್ತೀರ್ಣವನ್ನು ನಿಪಿ.8 ಪಂಚನಾಮೆಯಲ್ಲಿ ನಮೂದಿಸಿದ್ದೇನೆ ಆದರೆ ಸಂಪೂರ್ಣ ಮನೆಯ ವಿಸ್ತೀರ್ಣವನ್ನು ನಮೂದಿಸಿಲ್ಲ ಎನ್ನುತ್ತಾರೆ. ಫ್ರಾಸಾ.4 ರವರು ವಾಸವಿದ್ದ ಕೂಲಿ ಲೈನಿನಲ್ಲಿ ಒಟ್ಟು 6 ಮನೆಗಳು ಇದ್ದುದ್ದಾಗಿ ನಿಪಿ.8 ರಲ್ಲಿ ತೋರಿಸಲಾಗಿದೆ ಎಂದರೆ ಸರಿ. ಸದರಿ 6 ಮನೆಗಳಲ್ಲಿ ಕೂಲಿಗಾರರು ವಾಸವಾಗಿದ್ದರು ಎಂದರೆ ಸರಿ. ಸದರಿ ಕೂಲಿಗಾರರ ಪೈಕಿ ಫ್ರಾಸಾ.4 ರವರ ತಾಯಿಯನ್ನು ಹೊರತುಪಡಿಸಿ ನೀವು ಬೇರೆ ಯಾರನ್ನೂ ವಿಚಾರಿಸಿಲ್ಲ ಎಂದರೆ ಸರಿಯಲ್ಲ.

30. ದಿನಾಂಕ 04.08.2019 ರಂದು ಫ್ರಾಸಾ.4 ರವರು ವಾಸವಿದ್ದ ಮನೆಗೆ ಭೇಟಿ ನೀಡಿದ್ದಾಗಿ ಮತ್ತು ಅಲ್ಲಿ ಫ್ರಾಸಾ.2 ಮತ್ತು ಫ್ರಾಸಾ.3 ರವರ ಸಮಕ್ಷಮ ಫ್ರಾಸಾ.4 ರವರು ತೋರಿಸಿದ ಸ್ಥಳದಲ್ಲಿ ನಿಪಿ.8 ರಂತೆ ಪಂಚನಾಮೆಯನ್ನು ಜರುಗಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ನಿಪಿ.5

ಮತ್ತು ನಿಪಿ.6 ರಂತೆ ನೀವು ಯಾವುದೇ ಫೋಟೋಗಳನ್ನು ತೆಗೆಸಿಲ್ಲ ಎಂದರೆ ಸರಿಯಲ್ಲ. ನಿಪಿ.44 ರಂತೆ ಶವ ಪಂಚನಾಮೆಯನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಾಗಾರದಲ್ಲಿ ಫ್ರಾಸಾ.14, ಫ್ರಾಸಾ.15 ಮತ್ತು ಚಾಸಾ.5 ರವರ ಸಮಕ್ಷಮ ಜರುಗಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

31. ಫ್ರಾಸಾ.4 ರವರು ನಿಪಿ.12 ರಂತೆ, ಫ್ರಾಸಾ.5 ರವರು ನಿಪಿ.14 ರಂತೆ, ಫ್ರಾಸಾ.3 ರವರು ನಿಪಿ.40 ರಂತೆ ನಿಮಗೆ ಯಾವುದೇ ಹೇಳಿಕೆಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ದಿನಾಂಕ 04.08.2019 ರಂದು ಚಾಸಾ.25 ಮತ್ತು ಇತರೆ ಸಿಬ್ಬಂದಿ ಆರೋಪಿಯನ್ನು ಕಡೂರು ಬಸ್ ನಿಲ್ದಾಣದಲ್ಲಿ ರಾತ್ರಿ 9.30 ಗಂಟೆಗೆ ವಶಕ್ಕೆ ಪಡೆದು ರಾತ್ರಿ 10.30 ಗಂಟೆಗೆ ನಿಪಿ.48 ವರದಿಯೊಂದಿಗೆ ನಿಮ್ಮ ಮುಂದೆ ಹಾಜರುಪಡಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿಯನ್ನು ವಿಚಾರಿಸಿ ಆತನ ಸ್ವಇಚ್ಚಾ ಹೇಳಿಕೆಯನ್ನು ನಿಪಿ.31 ರಂತೆ ಫ್ರಾಸಾ.3 ಮತ್ತು ಫ್ರಾಸಾ.12 ರವರ ಸಮಕ್ಷಮ ಪಡೆದುಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಮೇಲೆ ಹೇಳಿದ ಸ್ಥಳ ಮತ್ತು ಸಮಯದಲ್ಲಿ ಆರೋಪಿಯನ್ನು ಬಂಧಿಸಿಲ್ಲ ಮತ್ತು ಆತ ನಿಮಗೆ ಯಾವುದೇ ಸ್ವಇಚ್ಚಾ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

32. ದಿನಾಂಕ 05.08.2019 ರಂದು ಆರೋಪಿಯ ಬಳಿ ಇದ್ದ ಮು,ಮಾ.1 ಒಂದು ಒಪ್ಪೊ ಮೊಬೈಲನ್ನು ಫ್ರಾಸಾ.3

ಮತ್ತು ಫ್ರಾಸಾ.12 ರವರ ಸಮಕ್ಷಮ ನಿಪಿ.10 ರಂತೆ ಪಂಚನಾಮೆಯನ್ನು ಜರುಗಿಸಿ ಅಮಾನತುಪಡಿಸಿಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಅದೇ ದಿನ ಆರೋಪಿ ತೋರಿಸಿದಂತೆ ಸುಧೀರ್ ಗೌಡರವರ ಕಾಫಿ ತೋಟದಲ್ಲಿದ್ದ ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೆ ಭೇಟಿ ನೀಡಿದ್ದಾಗಿ ಮತ್ತು ಅಲ್ಲಿ ಮನೆಯ ಹಾಲಿನಲ್ಲಿದ್ದ ಮು.ಮಾ.2 ಎಂದು ಗುರುತಿಸಲ್ಪಟ್ಟಿರುವ ಉಲ್ಲನ್ ರಗ್ಗನ್ನು ಪಂಚರಾದ ಫ್ರಾಸಾ.3 ಮತ್ತು ಫ್ರಾಸಾ.12 ರವರ ಸಮಕ್ಷಮ ನಿಪಿ.23 ರಂತೆ ಪಂಚನಾಮೆಯನ್ನು ಜರುಗಿಸಿ ಅಮಾನತುಪಡಿಸಿಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

33. ಫ್ರಾಸಾ.4 ರವರ ಹೆಬ್ಬೆಟ್ಟಿನ ಗುರುತುಗಳಿರುವ ಹಾಳೆಗಳನ್ನು Q 1 ಮತ್ತು Q2 ಎಂದು ನಮೂದು ಮಾಡಿ ಪಂಚರ ಸಮಕ್ಷಮ ನಿಪಿ.26 ರಂತೆ ಪಂಚನಾಮೆಯನ್ನು ಜರುಗಿಸಿ ಅಮಾನತುಪಡಿಸಿಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಪಂಚರಿಗೆ ನಿಪಿ.25 ರಂತೆ ನೋಟೀಸನ್ನು ಜಾರಿ ಮಾಡಿದ್ದಾಗಿ ಮತ್ತು ನಿಪಿ.29 ಮತ್ತು ನಿಪಿ.30 ರಂತೆ ಫೋಟೋಗಳನ್ನು ತೆಗೆಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

34. ನಿಪಿ.27 ಮತ್ತು ನಿಪಿ.28 ಎಂದು ಗುರುತಿಸಲ್ಪಟ್ಟಿರುವ ಫ್ರಾಸಾ.4 ರವರ ಹೆಬ್ಬೆಟ್ಟಿನ ಗುರುತುಗಳಿರುವ ಹಾಳೆಗಳನ್ನು ವಶಪಡಿಸಿಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ದಿನಾಂಕ 06.08.2019 ರಂದು ಪಿರ್ಯಾದಿ ಮತ್ತು

ಫ್ರಾಸಾ.4 ರವರ ಮರು ಹೇಳಿಕೆಗಳನ್ನು ನಿಪಿ.7 ಮತ್ತು ನಿಪಿ.13 ರಂತೆ ಪಡೆದುಕೊಂಡಿದ್ದಾಗಿ ಹೇಳಿರುವುದು ಸುಳ್ಳು ಅವರು ನಿಮಗೆ ಯಾವುದೇ ಮರು ಹೇಳಿಕೆಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ದಿನಾಂಕ 07.08.2019 ರಂದು ಫ್ರಾಸಾ.12 ರವರ ಹೇಳಿಕೆಯನ್ನು ನಿಪಿ.32 ರಂತೆ ಪಡೆದುಕೊಂಡಿದ್ದಾಗಿ ಹೇಳಿರುವುದು ಸುಳ್ಳು ಅವರು ನಿಮಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

35. ನಿಪಿ.52 ರಂತೆ ಮನವಿಯನ್ನು ನೀವು ವಿಭಾಗೀಯ ದಂಡಾಧಿಕಾರಿಗಳಿಗೆ ನೀಡದೇ ತಾಲ್ಲೂಕು ದಂಡಾಧಿಕಾರಿಗಳಿಗೆ ನೀಡಿದ್ದೀರಿ ಎಂದರೆ ಸರಿಯಲ್ಲ. ನಿಪಿ.53 ಮತ್ತು ನಿಪಿ.54 ರಂತೆ ನೀವು ಯಾವುದೇ ಮನವಿಗಳನ್ನು ಸಂಬಂಧಿಸಿದವರಿಗೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಅವುಗಳನ್ನು ಠಾಣೆಯಲ್ಲಿ ಸೃಷ್ಟಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ. ದಿನಾಂಕ 10.08.2019 ರಂದು ಮಗುವಿನ ಶವವನ್ನು ಹೊರತೆಗೆಯಲು ದಿನಾಂಕವನ್ನು ನಿಗದಿ ಪಡಿಸಿದ್ದಾಗಿ, ನೀವು ರಾಮನಹಳ್ಳಿಯ ಮುಸ್ಲಿಂ ಸ್ಮಶಾನಕ್ಕೆ ಭೇಟಿ ನೀಡಿದ್ದಾಗಿ, ಅಲ್ಲಿಗೆ ಫ್ರಾಸಾ.3 ಮತ್ತು ಫ್ರಾಸಾ.15 ರವರನ್ನು ಪಂಚರಾಗಿ ಬರಮಾಡಿಕೊಂಡಿದ್ದಾಗಿ, ಫ್ರಾಸಾ.11 ಮತ್ತು ಚಾಸಾ.15 ರವರು ಶವವನ್ನು ಹೊರತೆಗೆಯಲು ಸಹಕರಿಸಲು ನಗರಸಭೆಯಿಂದ ನಿಯುಕ್ತರಾಗಿ ಬಂದಿದ್ದಾಗಿ, ಅಲ್ಲಿಗೆ ಫ್ರಾಸಾ.16 ತಹಶೀಲ್ದಾರ್ ಮತ್ತು ಚಾಸಾ.19 ವೈದ್ಯರು ಬಂದಿದ್ದಾಗಿ, ಸ್ಥಳದಲ್ಲಿ ಹಾಜರಿದ್ದ ಫ್ರಾಸಾ.3 ರವರು ಮೃತ ಮಗುವನ್ನು ದಫನ್ ಮಾಡಲಾಗಿದ್ದ ಸ್ಥಳವನ್ನು ತೋರಿಸಿದ್ದಾಗಿ, ಅಲ್ಲಿ ಫ್ರಾಸಾ.16 ರವರ ಸಮಕ್ಷಮ ಫ್ರಾಸಾ.11 ಮತ್ತು ಚಾಸಾ.15

ರವರು ದಫನ್ ಮಾಡಲಾಗಿದ್ದ ಮಗುವಿನ ಶವವನ್ನು ಹೊರತೆಗೆದಿದ್ದಾಗಿ, ನಂತರ ಚಾಸಾ.15 ರವರು ಮಗುವಿನ ಬಲಕಾಲಿನ ತೊಡೆಯ ಮೂಳೆಯನ್ನು ಡಿ ಎನ್ ಎ ಪರೀಕ್ಷೆಯ ಸಲುವಾಗಿ ಶೇಖರಿಸಿಕೊಟ್ಟಿದ್ದಾಗಿ, ಆ ಬಗ್ಗೆ ನೀವು ಸ್ಥಳದಲ್ಲಿ ನಿಪಿ.21 ರಂತೆ ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 12.00 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ ಸದರಿ ಮೂಳೆಯನ್ನು ಅಮಾನತುಪಡಿಸಿಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

36. ದಿನಾಂಕ 10.08.2019 ರಂದು ಫ್ರಾಸಾ.6 ಮತ್ತು ಫ್ರಾಸಾ.5 ರವರ ಹೇಳಿಕೆಗಳನ್ನು ನಿಪಿ.15 ಮತ್ತು ನಿಪಿ.16 ರಂತೆ ಪಡೆದುಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ದಿನಾಂಕ 16.08.2019 ರಂದು ಫ್ರಾಸಾ.3 ರವರ ಸಿ ಆರ್ ಪಿ ಸಿ ಕಲಂ 164 ರಡಿಯಲ್ಲಿ ದಾಖಲಿಸುವಂತೆ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿ ಫ್ರಾಸಾ.3 ರವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿ ನಿಪಿ.41 ರಂತೆ ಸಿ ಆರ್ ಪಿ ಸಿ ಕಲಂ 164 ರಡಿಯಲ್ಲಿ ಹೇಳಿಕೆಯನ್ನು ಪಡೆದುಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆ ರೀತಿ ಫ್ರಾಸಾ.3 ರವರು ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

37. ಫ್ರಾಸಾ.3 ರವರಿಂದ ನಿಪಿ.42 ರಂತೆ ಮರು ಹೇಳಿಕೆಯನ್ನು ಪಡೆದುಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ದಿನಾಂಕ 18.08.2019 ರಂದು ಚಾಸಾ.20 ರವರಿಗೆ ಮನವಿ ಸಲ್ಲಿಸಿ ಕೃತ್ಯ ನಡೆದ ಅಸೆಸ್ ಮೆಂಟನ್ನು

ನೀಡುವಂತೆ ಕೋರಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಅದೇ ದಿನ ಚಾಸಾ.21 ರವರಿಗೆ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿಕೊಂಡುವಂತೆ ಮನವಿ ಸಲ್ಲಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿಯು ಪೊಲೀಸ್ ಕಾನ್ಸ್ಟೇಬಲ್ ತರಬೇತಿಯಲ್ಲಿದ್ದು ಕೃತ್ಯ ನಡೆದ ದಿನ ಆತ ತರಬೇತಿಗೆ ಹಾಜರಾಗಿದ್ದನೇ ಇಲ್ಲವೇ ಎಂಬುದರ ಬಗ್ಗೆ ದಾಖಲೆಯನ್ನು ನೀಡುವಂತೆ ಕಡೂರು ಪೊಲೀಸ್ ತರಬೇತಿ ಶಾಲೆಯ ಪ್ರಾಂಶುಪಾಲರಿಗೆ ಮನವಿ ಸಲ್ಲಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

38. ದಿನಾಂಕ 19.09.2019 ರಂದು ಕಡೂರು ತರಬೇತಿ ಶಾಲೆಯ ಪ್ರಾಂಶುಪಾಲರು ಆರೋಪಿ ದಿನಾಂಕ 03.08.2019 ರ ರಾತ್ರಿ 8.00 ಗಂಟೆಯಿಂದ ಕಡೂರು ಪೊಲೀಸ್ ತರಬೇತಿ ಶಾಲೆಯ ಘಟಕದಿಂದ ಅನಧೀಕೃತವಾಗಿ ಗೈರು ಹಾಜರಾಗಿದ್ದಾಗಿ ನಿಪಿ.59 ಮತ್ತು ನಿಪಿ.60 ರಂತೆ ದಾಖಲೆಗಳನ್ನು ಹಾಜರುಪಡಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

39. ದಿನಾಂಕ 18.10.2019 ರಂದು ಫ್ರಾಸಾ.4 ರವರ ಮಾದರಿ ಹೆಬ್ಬೆಟ್ಟಿನ ಗುರುತನ್ನು ಪಡೆಯಲು ಫ್ರಾಸಾ.3 ಮತ್ತು ಫ್ರಾಸಾ.8 ರವರಿಗೆ ನಿಪಿ.17 ರಂತೆ ನೋಟೀಸನ್ನು ಜಾರಿ ಮಾಡಿ ಅವರನ್ನು ಪಂಚರನ್ನಾಗಿ ನಿಮ್ಮ ಕಚೇರಿಗೆ ಬರಮಾಡಿಕೊಂಡಿದ್ದಾಗಿ ಅವರ ಸಮಕ್ಷಮ ಫ್ರಾಸಾ.4 ರವರ ಎಡಗೈನ ಹೆಬ್ಬೆಟ್ಟಿನ ಆರು ಮಾದರಿ ಗುರುತುಗಳನ್ನು ಒಂದು ಬಿಳಿಯ ಹಾಳೆಯಲ್ಲಿ ನಿಪಿ.61 ರಂತೆ ಪಡೆದುಕೊಂಡಿದ್ದಾಗಿ, ಅವುಗಳಿಗೆ ಕ್ರಮ ಸಂಖ್ಯೆ 1

ರಿಂದ 6 ರಂತೆ ನೀಡಿ ಸದರಿ ಹಾಳೆಯ ಮೇಲೆ R1 ಎಂದು ನಮೂದು ಮಾಡಿದ್ದಾಗಿ, ಸದರಿ ಹಾಳೆಯ ಮೇಲೆ ಮೇಲೆ ಹೇಳಿದ ಪಂಚರ ಸಹಿಗಳನ್ನು ಪಡೆದುಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆ ಬಗ್ಗೆ ನಿಪಿ.18 ರಂತೆ ಬೆಳಿಗ್ಗೆ 9.30 ಗಂಟೆಯಿಂದ 10.30 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿದ್ದಾಗಿ ಮತ್ತು ನಿಪಿ.11 ರಂತೆ ಫೋಟೋವನ್ನು ತೆಗೆಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

40. ಫ್ರಾಸಾ.10 ರವರ ಹೇಳಿಕೆಯನ್ನು ನಿಪಿ.20 ರಂತೆ, ಫ್ರಾಸಾ.9 ರವರ ಹೇಳಿಕೆಯನ್ನು ನಿಪಿ.19 ರಂತೆ ಪಡೆದುಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಅವರು ನಿಮಗೆ ಯಾವುದೇ ಹೇಳಿಕೆಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ.33 ರಲ್ಲಿ ಕೂಲಿ ಲೈನ್ ಗಳು ಇರುವ ಬಗ್ಗೆ ನಮೂದಾಗಿಲ್ಲ ಎಂದರೆ ಸರಿ.

41. ತನಿಖಾ ಕಾಲದಲ್ಲಿ ತೆಗೆದ ಫೋಟೋಗಳಿಗೆ ಸಂಬಂಧಿಸಿದಂತೆ ಫ್ರಾಸಾ.17 ರವರಿಂದ ನಿಪಿ.46 ರಂತೆ ಪ್ರಮಾಣ ಪತ್ರವನ್ನು ಮತ್ತು ನಿಪಿ.47 ರಂತೆ ಸಿಡಿಯನ್ನು ಪಡೆದುಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

42. ನಿಪಿ.64 ರಿಂದ ನಿಪಿ.67 ದಾಖಲೆಗಳು ಈ ಪ್ರಕರಣದ ಆರೋಪಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ನಿಪಿ.68 ರಿಂದ ನಿಪಿ.70 ದಾಖಲೆಗಳು ಈ ಪ್ರಕರಣಕ್ಕೆ ಸಂಬಂಧಿಸಿದ್ದವಲ್ಲ ಎಂದರೆ ಸರಿಯಲ್ಲ. ತನಿಖೆಯಲ್ಲಿ ಆರೋಪಿಯ ವಿರುದ್ಧ ಯಾವುದೇ

ಸಾಕ್ಷಾಧಾರ ಕಂಡು ಬರದೇ ಇದ್ದರೂ ಸಹ ಆತನ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ